1) -ಹೌದು-

2) ಆರಾಧನಾ ಯೋಜನೆಯು, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರು ವಾಸಿಸುವ ಸ್ಥಳಗಳಲ್ಲಿ ಹಾಗೂ ಹರಿಜನ ಕೇರಿ, ಲಾಂಬಣಿ ತಾಂಡ ಮಡ್ಡಿ ಕೇರಿ ಮುಂತಾದ ಸ್ಥಳಗಳಲ್ಲಿ ದೇವಸ್ಥಾನ ಭಜನಾ ಮಂದಿರಗಳ ನಿರ್ಮಾಣ ಹಾಗೂ ಇವುಗಳ ರಿಪೇರಿ ಮತ್ತು ಜೀರ್ಣೋದ್ಧಾರಕ್ಕಾಗಿ ಹಣವನ್ನು ಮುಂಜೂರು ಮಾಡುವುದಕ್ಕಾಗಿ ಮೀಸಲಾಗಿದೆ. ಸರ್ಕಾರವು ಈ ಯೋಜನೆಯ ಸೌಲಭ್ಯವನ್ನು ಅಲೆಮಾರಿ ಜನಾಂಗದವರಿಗೆ ವಿಸ್ತರಿಸುವ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

3) ಇಲ್ಲ.

ಜಿಲ್ಲಾಧಿಕಾರಿ, ತುಮಕೂರು ಇಲ್ಲಿ ಪ್ರಸ್ತಾವನೆ ಬಾಕಿ ಇಲ್ಲದೆ ಇರುವುದರಿಂದ ಇತರ ಪ್ರಶ್ನೆಗಳಿಗೆ ಉತ್ತರ ಉದ್ಭವಿಸುವುದಿಲ್ಲ.

ಅಲೆಮಾರಿ ಜನಾಂಗದವರನ್ನು ಗುರುತಿಸಿ ಸೌಲಭ್ಯ ನೀಡುವುದು

521 (977) ಶ್ರೀ ಎಸ್. ರುದ್ರಪ್ಪ:- (ತುರುವೇಕೆರೆ) ಟಿ. ಬಿ. ಜಯಚಂದ್ರ:- (ಕಳ್ಳಂಬಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸುತ್ತೋಲೆ ಮೂಲಕ ಅಲೆಮಾರಿ ಜನಾಂಗದವರನ್ನು ಗುರುತಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸರ್ಕಾರವು ಆದೇಶ ನೀಡಿರುವುದು ನಿಜವೆ?

ಆ) ಅಲೆಮಾರಿ ಜನಾಂಗದವರನ್ನು ಗುರುತಿಸಿ ವಾಸಿಸಲು ಮನೆ ಮತ್ತು ವ್ಯವಸಾಯಕ್ಕಾಗಿ ಜಮೀನು ಮಂಜೂರು ಮಾಡಲು ಸರ್ಕಾವು ಕ್ರಮ ಕೈಗೊಳ್ಳುವುದೇ? ಈ ಬಗ್ಗೆ ಸಮೀಕ್ಷೆ ನಡೆಸಿ ವರದಿ ಕಳಿಸದಿರುವುದು ನಿಜವೇ?

ಇ) ಕಂದಾಯ ಇಲಾಖೆಯ ಈ ವಿಳಂಬಕ್ಕೆ ಕಾರಣವೇನು. ಸಮರ್ಪಕವಾಗಿ ಗುರುತಿಸದಿರುವ ಗ್ರಾಮಲೆಕ್ಕಿಗರು ಹಾಗೂ ತಹಶೀಲ್ದಾರ್‌ರವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಕಂದಾಯ ಸಚಿವರು)

ಅ) ಹೌದು. ಒಂದು ಪತ್ರದ ಮೂಲಕ ತಿಳಿಸಲಾಗಿದೆ.

ಆ) ಅಲೆಮಾರಿ ಜನಾಂಗದವರನ್ನು ಗುರುತಿಸಿದ ನಂತರ ಸಂಬಂಧಪಟ್ಟ ಇಲಾಖೆಯು ಯೋಜನೆ ಸಿದ್ಧಪಡಿಸಿದಲ್ಲಿ ಅದನ್ನು ಜಾರಿಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಬೀದರ್, ಗುಲ್ಬರ್ಗಾ, ಮಂಡ್ಯ, ಉತ್ತರ ಕನ್ನಡ ಮತ್ತು ರಾಯಚೂರು ಜಿಲ್ಲಾಧಿಕಾರಿಗಳಿಂದ ವರದಿಗಳು ಬರಬೇಕಾಗಿದೆ.

ಇ) ವಿಳಂಬಕ್ಕೆ ಕಾರಣಗಳನ್ನು ತಿಳಿದುಕೊಂಡು ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

ಪೂರ್ಣಾನಂದ ಮಠಕ್ಕೆ ಹೆಚ್ಚಿನ ಹಣ ಬಿಡುಗಡೆ

592(1042) ಶ್ರೀ ಎಂ. ಕೆ. ಪಟ್ಟಣ ಶೆಟ್ಟಿ:- (ಬಾದಾಮಿ) ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

1. ಬಾದಾಮಿ ತಾಲ್ಲೂಕಿನ ಸೋಮನ ಕೊಪ್ಪ ಗ್ರಾಮದ ಪೂರ್ಣಾನಂದ ಮಠದ ಬಗ್ಗೆ ಬೆಳಗಾವಿ ವಿಭಾಗದ ಧಾರ್ಮಿಕ ಮತ್ತು ದತ್ತಿ ಉಪಕಮೀಷನರು ಹೆಚ್ಚಿನ ಹಣ ಮಂಜೂರು ಮಾಡಲು ಶಿಫಾರಸ್ಸು ಮಾಡಿದ್ದಾರೆಯೇ?

2. ಮಾಡಿದ್ದರೆ ಹಣವನ್ನು ಎಂದಿನಿಂದ ಬಿಡುಗಡೆ ಮಾಡಲಾಗುವುದು?

ಶ್ರೀ ರಾಜ ಅಮರೇಶ ನಾಯಕ್:- (ಧಾರ್ಮಿಕ ದತ್ತಿ ರಾಜ್ಯ ಸಚಿವರು)

1. -ಇಲ್ಲ-
2. -ಉದ್ಭವಿಸುವುದಿಲ್ಲ-

ಹಾಲು ಮಹಾಮಂಡಲದ ಒಟ್ಟು ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದವರ ಸಂಖ್ಯೆ

594 (1069) ಶ್ರೀ ಕೆ. ಸಿದ್ದಯ್ಯ:- (ಸಂತೆಮರಳ್ಳಿ) ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ಹಾಲು ಮಹಾಮಂಡಲದ ಒಟ್ಟು ಹುದ್ದೆಗಳೆಷ್ಟು;

ಆ) ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಇರುವ ಹುದ್ದೆಗಳೆಷ್ಟು, (ವರ್ಗವಾರು ಮಾಹಿತಿಯನ್ನು ನೀಡುವುದು);

ಇ) ನೇರ ನೇಮಕಾತಿಯಲ್ಲಿ ಕೊರತೆ ಬೀಳಲು ಕಾರಣಗಳೇನು?

ಈ) ನೇಮಕಾತಿಗಳಲ್ಲಿ ನಿಯಮಗಳ ಉಲ್ಲಂಘನೆ ಹಾಗೂ ಕಾನೂನು ಬಾಹಿರ ಕ್ರಮಗಳ ಬಗ್ಗೆ ಸೂಚನೆ ನೀಡಲು ಹಾಗೂ ವರದಿ ಮಾಡಲು ಯಾವುದಾದರೂ ವಿಚಿನ್ನಿ ಇದೆಯೇ;

ಉ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಊ) ಸರ್ಕಾರವು ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲು ಉದ್ದೇಶಿಸಿದೆಯೇ?

ಶ್ರೀ ಬಸವರಾಜ್ ಪಾಟೀಲ್:- (ಪಶು ಸಂಗೋಪನಾ ಪಶು ವೈದ್ಯ ಸಚಿವರು)

ಅ) 752

ಆ) 105

ಪರಿಶಿಷ್ಟ ಜಾತಿ-92

ಪರಿಶಿಷ್ಟ ವರ್ಗ-13

ಇತರೆ-647

ಇ) ಕೊರತೆಯಿರುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಂಡಿರುತ್ತದೆ.

ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯರ ಹುದ್ದೆಗಳು

595 (1092) ಶ್ರೀ ಎಲ್. ಆರ್. ಶಿವರಾಮೇಗೌಡ:- (ನಾಗಮಂಗಲ) ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಹೊಸದಾಗಿ ಗ್ರಾಮೀಣ ಪಶುವೈದ್ಯಾಲಯಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಎಷ್ಟು ಗ್ರಾಮೀಣ ಪಶುವೈದ್ಯಾಲಯಗಳ ಅವಶ್ಯಕತೆ ಇದೆ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಇ) ಈ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯರ ಹುದ್ದೆಗಳೆಷ್ಟು?